ಧಾರವಾಡ ಜಿಲ್ಲಾ ಮಂಡಲ ಪಂಚಾಯಿತಿಗಳಲ್ಲಿ ಹಣ ದುರುಪಯೋಗ

53. ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).– ಮಾನ್ಯ ಗ್ರಾಮೊಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಮಂಡಲ ಪಂಚಾಯತಿಗಳಲ್ಲಿ ಹಣ ದುರ್ವಿನಿಯೋಗವಾಗಿದ್ದು ಸರ್ಕಾರದ ಗಮನಕ್ಕೆ ಬಂದಿರುವುದೇ; ದುರ್ವಿನಿಯೋಗವಾಗಿರುವ ಮಂಡಲಗಳಾವುವು; ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೊಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖಾ ಸಚಿವರು):–

ಅ) ಧಾರವಾಡ ಜಿಲ್ಲೆಯ ಕೆಳಕಂಡ ಆರು ಮಂಡಲ ಪಂಚಾಯತಿಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

1) ಸೊರಟೂರು

2) ಕುರುಬಗೊಂಡ

3) ನಾಗಾವಿ

4) ಚಿಕ್ಕೆರೂರು

5) ಶಹಬರೂರು ಮತ್ತು

6) ಚಿಕ್ಕಾಂಶಿ ಹೊಸೂರು.

ಅವ್ಯವಹಾರವಾದ ಬಗ್ಗೆ ತನಿಖೆ ನಡೆಸಿ, ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು: ಈಗ ಅರ್ಜಿಯನ್ನೊಪ್ಪಿಸುವುದು. ಮಾನ್ಯ ಸದಸ್ಯರು ಹಾಜಬಿಲ್ಲ ರಾಮಸ್ವಾಮಿಯವರೆ, ಇವತ್ತು ನಿಮ್ಮಹುಟ್ಟಿದ ಹಬ್ಬ ನನ್ನ ಪರವಾಗಿ ಮತ್ತು ಸಭೆಯ ಪರವಾಗಿ ತಮಗೆ ಹಾರ್ದಿಕ ಶುಭಾಶಯಗಳನ್ನು ಬಯಸುತ್ತೇನೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಚಲನಚಿತ್ರ ತಯಾರಕರು ತಮ್ಮ ಕೆಲಸ ನಿಲ್ಲಿಸಿರುವ ಬಗ್ಗೆ

೧೨.೦೦ ಪಿ.ಎಂ.

† ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಸಾರ್ವಜನಿಕ ಮಹತ್ವವುಳ್ಳ ಒಂದು ನಿಲುವಳಿ ಸೂಚನೆಯನ್ನು ಒಂದು ನಿರ್ದಿಷ್ಟ ವಿಷಯದ ಬಗ್ಗೆ ತಮ್ಮ ಅನುಮತಿಗಾಗಿ ನಾನು ಕಳುಹಿಸಿಕೊಟ್ಟಿದ್ದೆ. ಅದೇನೆಂದರೆ, ಕಳೆದ 26 ದಿವಸದಿಂದ ಚಲನಚಿತ್ರ ತಯಾರಕರು ತಮ್ಮ ಕೆಲಸವನ್ನು ನಿಲ್ಲಿಸಿರುವುದರಿಂದ ಸುಮಾರು 3 ಸಾವಿರಕ್ಕಿಂತ ಹೆಚ್ಚಿಗೆ ಜನರು ಇವತ್ತು ಬೀದಿ ಪಾಲಾಗಿದ್ದಾರೆ. ಯಾವ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಆಕ್ಟ್ 1952 ಇರಲಿ ಅಲ್ಲಿಂದ 1981ರಲ್ಲಿ ಆಗಿರತಕ್ಕಂಥ ಕಾಯಿದೆ ಇರಲಿ ಅಥವಾ ಪಕ್ಕದಲ್ಲಿರತಕ್ಕಂಥ ತಮಿಳುನಾಡು ಆಂಧ್ರಪ್ರದೇಶಗಳ ಜೊತೆಯಲ್ಲಿ ಆಗಿರತಕ್ಕಂಥ ಒಪ್ಪಂದಗಳಾಗಲಿ ಯಾವುದೂ ನಮ್ಮ ರಾಜ್ಯದಲ್ಲಿ ಲಾಗು ಆಗಿಲ್ಲ. ಆದ್ದರಿಂದ ಇದರ ಬಗ್ಗೆ 3–4 ಮಹತ್ವವಾದ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಅನುಮತಿಯನ್ನು ಕೊಡಿ. ನಾನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈಗ ಏನಾಗಿದೆ ಎಂದರೆ ಮೂರು ಸಾವಿರ ಜನಕ್ಕೆ ಒಕ್ಕೂಟದವರು ಎಲ್ಲ ಸೇರಿ ನಮಗೆ ಅನ್ನ ಹಾಕುತ್ತಿದ್ದಾರೆ ಬೆಳಿಗ್ಗೆ ಮತ್ತು ಸಾಯಂಕಾಲ ಮಾತ್ರ ಹಾಕುತ್ತಿದ್ದಾರೆ ಮಧ್ಯಾಹ್ನದ ಹೊತ್ತು ಇಲ್ಲ. ಪ್ರೊಡ್ಯೂಸರ್‌ರವರುಗಳು ತಮ್ಮ ಪಾಡಿಗೆ ಅವರು ಇದ್ದಾರೆ. ಅವರಿಗೆ ಬೇರೆ ವರಮಾನ ಆದಾಯವಿದೆ. ಆದರೆ ಕೆಲಸ ಮಾಡತಕ್ಕಂಥ ನೌಕರರಿಗೆ ತೊಂದರೆಯಾಗಿದೆ. ಆದ್ದರಿಂದ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:ತಾವು ಆಜ್ಞರ್ನ್‌ಮೆಂಟ್ ಮೋಷನ್ ಕಳುಹಿಸಿಕೊಟ್ಟಿದ್ದೀರಿ, ಅದನ್ನು ಪರಿಶೀಲನೆ ಮಾಡಿ, ಸಾಧ್ಯವಾದರೆ ನಾಳೆ ಗಮನಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಪ್ರಮುಖವಾದಂಥ ವಿಚಾರ, ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ಉಳಿಯಬೇಕೆನ್ನತಕ್ಕ ಸಿದ್ಧಾಂತದ ಮೇಲೆ ತತ್ವದ ಮೇಲೆ ಸರ್ಕಾರದವರು ಅದಕ್ಕೆ ಬೇಕಾದಂಥ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರೂ ನಿರ್ಮಾಪಕರು, ಕಾರ್ಮಿಕರನ್ನು ಹೊರಗಡೆ ಹಾಕಿದ್ದಾರೆ. ನಾವು ರಾಜ್ಯವನ್ನು ಬಿಟ್ಟು ಹೊರಗೆ ಹೋದರೂ ನಿಮಗೆ ಅನುಕೂಲ ಮಾಡಿಕೊಡುವುದಿಲ್ಲವೆನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ ಇದು ಒಂದು ಗುರುತರವಾದ ಪ್ರಶ್ನೆಯಾಗಿದೆ. ಕಾರ್ಮಿಕರು ಬೀದಿಗೆ ಬಂದಿದ್ದಾರೆ, ಅವರಿಗೆ ತೊಂದರೆಯಾಗಿದೆ. ಆದ್ದರಿಂದ ಅವರನ್ನು ಅರೆಸ್ಟ್ ಮಾಡಿ, ಅವರನ್ನು ದಸ್ತಗಿರಿ ಮಾಡಿ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಲು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ. ಬಿ. ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರವನ್ನು ವಿಜ್ಞಾಪನೆ ಮಾಡಿಕೊಳ್ಳುವುದಿಷ್ಟೇ. ಪ್ರತಿಯೊಂದು ಸಂದರ್ಭದಲ್ಲೂ ರಾಜ್ಯದಲ್ಲಿ ಅನೇಕ ಪ್ರಮುಖವಾದ ಸಂಗತಿಗಳು ಉಂಟಾಗುತ್ತವೆ. ಕೆಲವು ಪ್ರಮುಖವಾದ ವಿಷಯಗಳು ಸದನದಲ್ಲಿರುವಾಗ 4–6 ದಿವಸಗಳಲ್ಲಿಯೇ ಪ್ರಸ್ತಾಪ ಮಾಡಬೇಕಾಗುತ್ತದೆ. ಆದರೆ ಸರ್ಕಾರ ಈ ವಿಷಯಗಳ ಬಗ್ಗೆ ನಾವು ಪ್ರಸ್ತಾಪ ಮಾಡಬೇಕು, ಇಲ್ಲವಾದರೆ ಅವರಾಗಿಯೇ ಕೆಲಸ ಮಾಡತಕ್ಕಂಥದ್ದಾಗಲಿ ಕ್ರಮ ತೆಗೆದುಕೊಳ್ಳತಕ್ಕಂಥದ್ದಾಗಲಿ ಒಂದು ಉದಾಹರಣೆಯೂ ಇಲ್ಲ. ನಾವು ಇಲ್ಲಿ ಪ್ರಸ್ತಾಪ ಮಾಡಿದ ಮೇಲೆ ಆಗ ಮಾತ್ರ ಸಮಸ್ಯೆಗಳ ಕಡೆ ಸರ್ಕಾರದವರು ನೋಡುವಂಥ ಪರಿಪಾಠವಿದೆ. ಸರ್ಕಾರ ತಾನಾಗಿಯೇ ಏನು ಕೆಲಸ ಮಾಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಏನು ಕ್ರಮ ತೆಗೆದು ಕೊಂಡಿದ್ದಾರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇಲ್ಲದಿದ್ದರೆ ಜನರಿಗೆ ಸರ್ಕಾರ ಬದುಕಿದಿಯೋ ಇಲ್ಲವೋ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ತಾವು ಈ ವಿಚಾರವನ್ನು ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿರುವುದು ಬಹಳ ಸಂತೋಷ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ ಪ್ರತಿಯೊಂದು ವಿಷಯ ವಿರೋಧಪಕ್ಷದವರು ಎತ್ತಿದಮೇಲೆ, ಬಗೆ ಹರಿಸಲಿಕ್ಕೆ ಪ್ರಯತ್ನ ಮಾಡುತ್ತೀರಿ. ಈಗಾಗಲೇ 26 ದಿವಸಗಳಾಗಿದೆ. 3000 ಜನರು ಬೀದಿಪಾಲಾಗಿದ್ದಾರೆ, ಪ್ರೊಡ್ಯಸರ್ಸ್ ಅವರು ಸಾಕಷ್ಟು ಸಂಪಾದನೆ ಮಾಡಿದ್ದಾರೆ. ಫಿಲಮ್‌ಸ್ಟಾರ್ಸ್‌ಗೂ ಏನೂ ಸಮಸ್ಯೆ ಇರುವುದಿಲ್ಲ.

ಅಧ್ಯಕ್ಷರು:– ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ. ಎಂ.ವೀರಪ್ಪ ಮೊಯ್ಲಿ :– ಸನ್ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಯಾಗಿ ತಾವು ಇದನ್ನು ಪರಿವರ್ತನೆ ಮಾಡಿದ್ದೀರಿ. ಸರ್ಕಾರ ನಾಳೆ ಇದಕ್ಕೆ ಉತ್ತರವನ್ನು ಕೊಡುತ್ತದೆ. ಆದರೆ ಏನಾಗಿದೆ ಎಂದರೆ, ಸನ್ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಸದನದಲ್ಲಿ ವಿರೋಧಪಕ್ಷದವರು ಎತ್ತಿದಾಗ ಮಾತ್ರ ಸರ್ಕಾರ ಅದಕ್ಕೆ ಕ್ರಮ ತೆಗೆದು ಕೊಳ್ಳುಲು ಆಲೋಚನೆ ಮಾಡುತ್ತದೆ ಎನ್ನುವ ಮಾತನ್ನು ಹೇಳಿದರು. ಇದು ಸರಿಯಾದುದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಮಾತುಕತೆಗೆ ಕರೆದಲ್ಲಿ ಅವರ ಪರಿಸ್ಥಿತಿ ಏನು ಎನ್ನುವುದು ಗೊತ್ತಾಗುತ್ತದೆ. ಕರೆದು ಕೇಳಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ: ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಮ ಸಂಪುಟದ ಸದಸ್ಯರು ಮಾತನಾಡುವಾಗ ಕಾರ್ಮಿಕರು ಕೆಲವರು ಬಂದಿದ್ದರು, ನಿರ್ಮಾಪಕರು ಬಂದಿದ್ದರು ಅವರು ಇದನ್ನು ಪರಿಹಾರ ಮಾಡಬೇಕೆಂದು ಬರೆದಿದ್ದಾರೆ. ಇದು ಒಂದು ವಿಚಿತ್ರವಾದ ಸಮಸ್ಯೆಯಾಗಿದೆ. ಇದು ಕಾರ್ಮಿಕರು ಸಂಪು ಹೊಡಿರುವುದಿಲ್ಲ. ನಿರ್ಮಾಪಕರೇ ಸಂಪು ಹೂಡಿದ್ದಾರೆ ಆದ್ದರಿಂದ ಇದೊಂದು ವಿಪರೀತವಾದ ಸಮಸ್ಯೆಯಾಗಿದೆ. ಬಹುಶಃ ಕಾರ್ಮಿಕರು ಬಂದು ಬೇಡಿಕೆಯನ್ನು ಮುಂದಿಟ್ಟು ಸಂಪು ಮಾಡುವಂಥದ್ದನ್ನು ನಾವು ಕೇಳಿದ್ದೇವೆ. ಇದು ನಿರ್ಮಾಪಕರೇ ಸಂಪು ಮಾಡಿರುವುದಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಿರ್ಮಾಪಕರು ಸಂಪು ಮಾಡಿರುವುದು, ಕಾರ್ಮಿಕರನ್ನು ತುಳಿದುಹಾಕಬೇಕೆಂದು.

ಶ್ರೀ ಎಂ. ವೀರಪ್ಪ ಮೊಯ್ಲಿ: ಇದರ ಬಗ್ಗೆ ಸರಿಯಾದ ಉತ್ತರವನ್ನು ಕೊಡುತ್ತೇವೆ. ಆದರೆ ಸರ್ಕಾರದವರು ಏನೂ ಮಾತುಕತೆ ನಡೆಸಿಲ್ಲ, ಏನೂ ಪ್ರಯತ್ನ ಮಾಡಿಲ್ಲವೆಂದು ಹೇಳುವುದು ಸರಿಯಾದುದಲ್ಲವೆಂದು ಹೇಳುತ್ತೇನೆ.

ವರದಿಯನ್ನುಒಪ್ಪಿಸುವುದು

ಶ್ರೀ ಬಿ. ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ನಾನು ನನ್ನ ಹೆಸರಿನ ಮುಂದೆ ಇರುವ ಅಂದಾಜು ಸಮಿತಿಯ ವರದಿಯನ್ನು ಸದನದ ಮುಂದೆ ಇಡಬಯಸುತ್ತೇನೆ.